# ಸುದ್ದಿ ಸಂಚಯ




ವಿವೇಕಪ್ರಭ ವಿಶೇಷಾಂಕದ ಬಿಡುಗಡೆ

❯ **ಹೈದರಾಬಾದಿನಲ್ಲಿರುವ ರಾಮಕೃಷ್ಣ ಮಠದ** ಅಂಗಸಂಸ್ಥೆಯಾದ **ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್** ಎಕ್ಸಲೆನ್ಸ್ (ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ) ಹಾಗೂ ಭಾರತೀಯ ಬ್ಯಾಂಕ್‌ಗಳ ಸಂಘದ ವತಿಯಿಂದ ನವೆಂಬರ್ ೨೮ ರಂದು 'ವ್ಯಕ್ತಿತ್ವ ವಿಕಸನ ಮತ್ತು ಗ್ರಾಹಕ ಸಂಬಂಧಗಳು' ಎಂಬ ವಿಷಯವನ್ನು ಕುರಿತು ವಿಶೇಷ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

❯ ಏಪ್ರಿಲ್ ೨೦೦೪ರಿಂದ ಸೆಪ್ಟೆಂಬರ್ ೨೦೦೪ರವರೆಗೆ **ಮಥುರೆಯ ಬೃಂದಾವನದಲ್ಲಿ** ಎಲ್ಲ ಚಿಕಿತ್ಸೆಯನ್ನೂ ಉಚಿತವಾಗಿ ನೀಡುತ್ತಾ ಬಂದಿರುವ **ರಾಮಕೃಷ್ಣ ಮಿಷನ್ ಸೇವಾಶ್ರಮ** ಆಸ್ಪತ್ರೆಯ ಕೆಲವು ಮಹತ್ವದ ಸಾಧನೆಗಳು ಹೀಗಿವೆ : ಟಿ.ಬಿ., ಕ್ಯಾನ್ಸರ್‌ನಂಥ ಮಾರಕರೋಗಗಳ ತಪಾಸಣೆಯೊಂದಿಗೆ ಇದೀಗ ರಕ್ತದ ಬ್ಯಾಂಕನ್ನು ಕೂಡ ಪ್ರಾರಂಭಿಸಲಾಗಿದೆ. ಸಂಚರಿಸುವ ವಾಹನದ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಉಚಿತ ವೈದ್ಯಕೀಯ ಸಲಹೆ ಮತ್ತು ಸೇವೆ ನಡೆಯುತ್ತಿದೆ. ೪೭೦ ವಿಧವೆಯರಿಗೆ ೨,೯೩,೧೭೪ ರೂಗಳ ಬೆಲೆಬಾಳುವ ಬಟ್ಟೆ, ಪಾತ್ರೆಗಳು, ಕಂಬಳಿ ಹಾಗೂ ಅಡಿಗೆ ಪದಾರ್ಥಗಳನ್ನು ನೀಡಲಾಗಿದೆ. ಬಡ ಹೆಣ್ಣುಮಕ್ಕಳ ಮದುವೆ ಮುಂತಾದ ಶುಭಕಾರ್ಯಗಳಿಗೆ ಹಾಗೂ ನಿರ್ಗತಿಕರ ಅಂತ್ಯೇಷ್ಟಿ ಮೊದಲಾದವುಗಳಿಗೆ ೬೧,೯೬೧ ರೂಪಾಯಿಗಳನ್ನು ವಿತರಿಸಲಾಗಿದೆ.

❯ ದಿನಾಂಕ ೧೪.೧೨.೨೦೦೪ರಂದು ಶ್ರೀಮಾತೆ ಶಾರದಾದೇವಿಯವರ ೧೫೦ನೆಯ ಜಯಂತಿಯ ಅಂಗವಾಗಿ **ಬೆಂಗಳೂರಿನ ಶಾರದಾಸೇವಾಶ್ರಮದಲ್ಲಿ** ವಿಶೇಷ ಸತ್ಸಂಗವನ್ನು ಮಧ್ಯಾಹ್ನ ೩.೦೦ ರಿಂದ ೪.೦೦ ಘಂಟೆಯವರೆಗೆ ಏರ್ಪಡಿಸಲಾಗಿತ್ತು. ೪.೩೦ಕ್ಕೆ ಸರಿಯಾಗಿ ಶ್ರೀಮಾತೆಯ ಮೂರ್ತಿಯನ್ನು ಸುಂದರವಾಗಿ ಅಲಂಕರಿಸಿರುವ ರಥ ಬನಶಂಕರಿಯ ಮೂಲಕ ಬಸವನಗುಡಿಯತ್ತ ಸಾಗಿತು. ಹಿರಿಯ ಯತಿಗಳಿಂದ ಆರತಿಯಾದ ನಂತರ ಭಜನೆಯನ್ನು ಹಾಡುತ್ತ ಶ್ರೀಮಾತೆಯನ್ನು ಕರೆತರುವ ದೃಶ್ಯ ಮನೋಹರವಾಗಿತ್ತು. ೨೫೦ ಮನೆಗಳಲ್ಲಿ ನಡೆದ 'ಮನೆಯಿಂದ ಮನೆಗೆ ಶ್ರೀಮಾತೆ ಶಾರದಾದೇವಿ' ಎಂಬ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಪಡೆಯಿತು.



ಶ್ರೀಮಾತೆಯವರ ಮೆರವಣಿಗೆಯ ದೃಶ್ಯ

❯ ಡಿಸೆಂಬರ್ ೧೮ ಹಾಗೂ ೧೯ರಂದು **ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು** ೨೦೦೩ರ ವಿಜಯದಶಮಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜ್ಞಾನವಾಹಿನಿ ಕಾರ್ಯಕ್ರಮದ ಮೂಲಕ ಕೈಗೊಂಡ ಒಂದು ವರ್ಷದ ಸತತ ಜ್ಞಾನಪ್ರಸಾರ ಅಭಿಯಾನದ ಸಮಾರೋಪ ಸಮಾರಂಭ ಹಾಗೂ ವಿವೇಕಪ್ರಭ ಮಾಸಪತ್ರಿಕೆಯ ಐದು ವರ್ಷಗಳ ಯಶಸ್ವೀ ಪ್ರಕಟನೆಯ ದ್ಯೋತಕವಾಗಿ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಿತ್ತು. ಪೂಜ್ಯರಾದ ಸ್ವಾಮಿ ಗೌತಮಾನಂದಜಿ, ಧರ್ಮಾತ್ಮಾನಂದಜಿ, ಜಗದಾತ್ಮಾನಂದಜಿ ಹಾಗೂ ಇತರ ಹಿರಿಯರು ಭಾಗವಹಿಸಿ, ಕಾರ್ಯಕರ್ತರು ಹಾಗೂ ಭಕ್ತರನ್ನು ಉದ್ದೇಶಿಸಿ ಮಾತನಾಡಿದರು. ೧೯.೧೨.೨೦೦೪ರಂದು ಸ್ವಾಮಿ ವಿವೇಕಾನಂದರ ಪ್ರತಿಮೆಯೊಂದಿಗೆ ಹೊರಟ ಮೆರವಣಿಗೆಯ ನಂತರ ಶ್ರೀ ದೇ. ಜವರೇಗೌಡರು (ದೇಜಗೌ) ವಿವೇಕಪ್ರಭದ ಜನವರಿ ೨೦೦೫ರ 'ಕುವೆಂಪು ವಿಶೇಷಾಂಕ'ದ ಬಿಡುಗಡೆಯನ್ನು ಮಾಡಿದರು. ಇದೇ ಸಂದರ್ಭದಲ್ಲಿ ವಚನವೇದಕ್ಕೆ ಕುವೆಂಪು ಬರೆದಿರುವ ಮುನ್ನುಡಿಯ ಆಂಗ್ಲ ಅನುವಾದ *A Homage to Gospel* ಪುಸ್ತಕವನ್ನೂ ಬಿಡುಗಡೆ ಮಾಡಲಾಯಿತು. ಈ ಅನುವಾದ ಡಾ.ಪ್ರಭುಶಂಕರರದು. **'ನಾನು ಯಾರು?'** (Who am I? ) ವ್ಯಕ್ತಿತ್ವವಿಕಸನಕ್ಕೆ ಸಂಬಂಧಪಟ್ಟ ಸಿ.ಡಿ.ಯನ್ನು ಸ್ವಾಮಿ ಜಗದಾತ್ಮಾನಂದಜಿಯವರು ಬಿಡುಗಡೆ ಮಾಡಿದರು. ಅದರ ನಿರ್ದೇಶಕ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಯಾದ ಶ್ರೀ ಎಂ. ಪಿ. ಕಾರ್ತಿಕ್.

❯ **ಬೆಂಗಳೂರಿನ ರಾಮಕೃಷ್ಣ ಮಠದ** ಶತಮಾನೋತ್ಸವವು ೨೦೦೪ ಡಿಸೆಂಬರ್ ೨೫ರಿಂದ ಪ್ರಾರಂಭವಾಯಿತು. ವರ್ಷದಾದ್ಯಂತ ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಿವೃತ್ತ ನ್ಯಾಯಾಧೀಶರಾದ ಶ್ರೀ ಎಮ್. ಎನ್ ವೆಂಕಟಾಚಲಯ್ಯನವರು ಉದ್ಘಾಟನೆಯನ್ನು ನೆರವೇರಿಸಿದರು. ಡಾ. ಪ್ರಭುಶಂಕರ, ಡಾ.ಎಚ್.ಎನ್. ಮುರಳೀಧರ, ಡಾ.ಟಿ.ಎಂ. ನಂಜುಂಡಪ್ಪ, ಡಾ. ಆರ್. ಬಾಲಸುಬ್ರಹ್ಮಣ್ಯಂ, ಡಾ. ಸುದರ್ಶನ್ ಹಾಗೂ



ಬೆಂಗಳೂರು ಮಠದ ಶತಮಾನೋತ್ಸವದ ಉದ್ಘಾಟನೆ

ಇತರ ಗಣ್ಯರು ಸಭಿಕರನ್ನುದ್ದೇಶಿಸಿ ಮಾತನಾಡಿದರು. ಪೂಜ್ಯ ಸ್ವಾಮಿ ಪ್ರಭಾನಂದಜಿ ಹಾಗೂ ಪುರುಷೋತ್ತಮಾನಂದಜಿಯವರ ಅಧ್ಯಕ್ಷತೆಯಲ್ಲಿ ಎರಡು ವಿಶೇಷ ವಿಚಾರ ಸಂಕಿರಣಗಳು ನಡೆದವು. ಈ ಸಂದರ್ಭದಲ್ಲಿ ವಿಶೇಷ ಸ್ಮರಣಸಂಚಿಕೆಯೊಂದನ್ನು ಬಿಡುಗಡೆ ಮಾಡಲಾಯಿತು. ದೇಶದ ವಿವಿಧ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಗಳಿಂದ ಅನೇಕ ಸಾಧುಗಳು ಭಾಗವಹಿಸಿದರು.

☽ ಕೊಲ್ಕತಾದ ರಹರಾದಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾರ್ಥಿ ನಿಲಯವು ಶ್ರೀಮಾತೆಯ ೧೫೦ನೆಯ ಜಯಂತಿಯನ್ನು ವಿಶೇಷವಾಗಿ ಆಚರಿಸಿತು. ೨.೭೩ ಲಕ್ಷ ರೂಪಾಯಿಯ ಬೆಲೆಬಾಳುವ ಬಟ್ಟೆ, ಸೀರೆ, ಕಂಬಳಿ, ಪುಸ್ತಕ ಹಾಗೂ ಔಷಧವನ್ನು ಬಡ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಿತರಿಸಲಾಯಿತು. ೧೫೫೦ ಬಾಲಕಿಯರನ್ನು ಒಳಗೊಂಡಂತೆ ೧,೭೦೦ ಅಭ್ಯರ್ಥಿಗಳು ಶ್ರೀಮಾತೆಯ ಜೀವನವನ್ನಾಧರಿಸಿದ ಪರೀಕ್ಷೆಗಳಲ್ಲಿ ಭಾಗವಹಿಸಿದರು. ೭೦ ಶಾಲೆಗಳಿಗೆ ಒಂದು ಲಕ್ಷ ಶ್ರೀಮಾತೆಯ ಪುಸ್ತಕಗಳನ್ನು ಉಚಿತವಾಗಿ ನೀಡಿ ಈ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

☽ ೨೦೦೪ ಡಿಸೆಂಬರ್ ೨೪, ೨೫ ಹಾಗೂ ೨೬ರಂದು ತಮಿಳುನಾಡಿನ ನೈವೇಲಿಯಲ್ಲಿ ಬೃಹತ್ ಭಕ್ತಸಮ್ಮೇಳನವನ್ನು ಆಯೋಜಿಸಲಾಗಿತ್ತು. ೧೨ ವರ್ಷಗಳಿಂದ ಸತತವಾಗಿ ನಡೆದು ಬರುತ್ತಿರುವ ಈ ಸಮ್ಮೇಳನ ಪ್ರತಿವರ್ಷ ರಾಜ್ಯದ ವಿವಿಧ ಪ್ರದೇಶಗಳಲ್ಲಿರುತ್ತದೆ. ನಗರ ಸಂಕೀರ್ತನೆ, ಭಜನೆ, ವಿಶೇಷ ಉಪನ್ಯಾಸಗಳು, ವಿಶೇಷ ಸಂಚಿಕೆಯ ಬಿಡುಗಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

☽ ಕೊಲ್ಕತಾದ ರಾಮಕೃಷ್ಣ ಮಿಷನ್ ಸಾಂಸ್ಕೃತಿಕ ಸಂಸ್ಥೆಯು ಶ್ರೀಮಾತೆಯ ೧೫೦ನೆಯ ಜಯಂತಿಯ ಮುಕ್ತಾಯ ಸಮಾರಂಭವನ್ನು ೧೬ರಿಂದ ೧೯ರ ಡಿಸೆಂಬರ್‌ವರೆಗೆ ಆಯೋಜಿಸಿತ್ತು. ಪ್ರಸಿದ್ಧ ವಾಗ್ಮಿಗಳ, ಲೇಖಕರ, ಚಿಂತಕರ ಹಾಗೂ ಕವಿಗಳ ವಿಶೇಷ ಉಪನ್ಯಾಸಗಳನ್ನೇ ಅಲ್ಲದೆ ಭಕ್ತ ಸಮ್ಮೇಳನ, ಭಜನೆ ಹಾಗೂ ವಿಚಾರ ಸಂಕಿರಣಗಳನ್ನೂ ಏರ್ಪಡಿಸಲಾಗಿತ್ತು.

* ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯು ತನ್ನ ಸುವರ್ಣ ಮಹೋತ್ಸವದ ಅಂಗವಾಗಿ ಶಿಕ್ಷಕರಿಗಾಗಿ ಒಂದು ವಿಶೇಷ ಕಾರ್ಯಾಗಾರವನ್ನು ಡಿಸೆಂಬರ್ ೨೯ರಂದು ಏರ್ಪಡಿಸಿತ್ತು. ಪ್ರಸಿದ್ಧ ಶಿಕ್ಷಣತಜ್ಞರಾದ ಕೊಯಮತ್ತೂರಿನ ಡಾ. ಎಮ್.ಜಿ. ಮಣಿ ಹಾಗೂ ಬೆಂಗಳೂರಿನ IACTದ ನಿರ್ದೇಶಕರಾದ ಡಾ. ಗುರುರಾಜ ಕರ್ಜಗಿಯವರು ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದರು.

☽ ಜಮ್ಮುವಿನ ರಾಮಕೃಷ್ಣ ಮಹಾಸಂಘದ ಹೊಸ ಕೇಂದ್ರವು ಸುಮಾರು ನಾಲ್ಕು ವರ್ಷಗಳಿಂದ ಆ ಪ್ರದೇಶದಲ್ಲಿ ಅನೇಕ ಸೇವಾಚಟುವಟಿಕೆಗಳಲ್ಲಿ ತೊಡಗಿದ್ದು ಅಲ್ಲಿನ ಜನರ ಧಾರ್ಮಿಕ, ಸಾಂಸ್ಕೃತಿಕ ಬದುಕಿಗೆ ಹೊಸ ಆಯಾಮವನ್ನು ನೀಡುವ ಪ್ರಯತ್ನದಲ್ಲಿ ತೊಡಗಿದೆ. ಇತ್ತೀಚೆಗೆ ನವದೆಹಲಿಯ ಶ್ರೀಮತಿ ಪುಷ್ಪಾ ಚಿತ್ರಕ್ ಅವರ ಕಲೆಗಾರಿಕೆಯಲ್ಲಿ ಮೂಡಿಬಂದಿರುವ ಶ್ರೀಮಾತೆ ಶಾರದಾದೇವಿಯವರ ಒಂದು ವರ್ಣಚಿತ್ರದ ಅನಾವರಣವನ್ನು ಹಾಗೂ ಶ್ರೀಮಾತೆಯವರ ಜೀವನ ಸಂದೇಶಗಳ ಕುರಿತ ಚಿತ್ರ ಪ್ರದರ್ಶನವನ್ನು ಜಮ್ಮುಕಾಶ್ಮೀರದ ಉಪಮುಖ್ಯಮಂತ್ರಿ ಪಂಡಿತ್ ಮಂಗತ್‌ರಾಮ ಶರ್ಮ ಅವರು ಮಾಡಿದರು. ✡

ಶ್ರೀಮತಿ ಪುಷ್ಪಾ ಚಿತ್ರಕ್ ಅವರು ಬಿಡಿಸಿರುವ ತೈಲ ಚಿತ್ರಗಳು



